ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ. ಇಡಿ/ಕೆಇಎ/ಯುಜಿಸಿಇಟಿ/2023

ದಿನಾಂಕ. 19.10.2023

## ಯುಜಿಸಿಇಟಿ –2023 (ಇಂಜಿನಿಯರಿಂಗ್) – ವಿಶೇಷ ಸುತ್ತು ಮತ್ತು ದಂಡವಿನಾಯಿತಿ ಸುತ್ತೋಲೆ

ಘನ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಎಐಸಿಟಿಇ ಸಂಸ್ಥೆಯ ಸುತ್ತೋಲೆ ಸಂಖ್ಯೆ. ಎಡಿಬಿ/ಆರ್‌ಬಿ/ಅಕ್ಯಾಡಮಿಕ್ ಕ್ಯಾಲೆಂಡರ್/2023–24 ದಿನಾಂಕ. 17.10.2023ರಂತೆ 2023–24ನೇ ಸಾಲಿನ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶದ ಕೊನೆಯ ದಿನಾಂಕವನ್ನು 30.10.2023ರವರೆಗೆ ವಿಸ್ತರಿಸಲಾಗಿರುತ್ತದೆ. ಆದ್ದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಇಂಜಿನಿಯರಿಂಗ್ ಕೋರ್ಸುಗಳಿಗೆ ಸೀಟು ಹಂಚಿಕೆಯನ್ನು ಪಡೆದು ಶುಲ್ಕ ಪಾವತಿಸದ ಅಭ್ಯರ್ಥಿಗಳು ಕಾಲೇಜುಗಳಿಗೆ ನೇರವಾಗಿ ಶುಲ್ಕವನ್ನು ಪಾವತಿಸಿ ಪ್ರವೇಶವನ್ನು ಪಡೆಯಬಹುದು. ಇಂಜಿನಿಯರಿಂಗ್ ವಿದ್ಯಾ ಸಂಸ್ಥೆಗಳು ಸರ್ಕಾರವು 2023–24ನೇ ಸಾಲಿಗೆ ಸರ್ಕಾರಿ ಕೋಟಾದ ಸೀಟುಗಳಿಗೆ ನಿಗಧಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ. ಕಾಲೇಜುಗಳು ತಮ್ಮಲ್ಲಿ ಭರ್ತಿಯಾಗದೆ ಬಾಕಿ ಉಳಿದಿರುವ ಸರ್ಕಾರಿ ಕೋಟಾದ ಸೀಟುಗಳನ್ನು ತಮ್ಮ ವೆಬ್‌ಸೈಟಿನಲ್ಲಿ ಪ್ರಕಟಿಸತಕ್ಕದ್ದು.

ಸೀಟು ಹಂಚಿಕೆ ಪಡೆದು ಶುಲ್ಕ ಪಾವತಿಸಿ ಕಾಲೇಜಿಗೆ ವರದಿ ಮಾಡಿಕೊಳ್ಳದ ಅಭ್ಯರ್ಥಿಗಳು ಈಗಗಲೇ ಹಂಚಿಕೆ ಪಡೆದ ಕಾಲೇಜಿಗೆ 30.10.2023ರೊಳಗೆ ವರದಿ ಮಾಡಿಕೊಳ್ಳಬಹುದಾಗಿರುತ್ತದೆ. ಶುಲ್ಕ ಪಾವತಿಸಿ ಅಡ್ಮಿಷನ್ ಆರ್ಡರ್ ಡೌನ್‌ಲೋಡ್ ಮಾಡಿಕೊಳ್ಳದ ಅಭ್ಯರ್ಥಿಗಳು ಪ್ರಾಧಿಕಾರದ ಕಛೇರಿಗೆ ಬಂದು ಶುಲ್ಕ ಪಾವತಿಸಿರುವ ದಾಖಲೆಗಳನ್ನು ಸಲ್ಲಿಸಿ ಅಡ್ಮಿಷನ್ ಆರ್ಡರ್ ಪಡೆದುಕೊಳ್ಳಬಹುದು. ನಂತರ ಕಾಲೇಜಿಗೆ ದಿನಾಂಕ. 30.10.2023ರೊಳಗೆ ವರದಿ ಮಾಡಿಕೊಳ್ಳ ತಕ್ಕದ್ದು. ಅಡ್ಮಿಷನ್ ಆರ್ಡರ್ ಇರುವ ಅಭ್ಯರ್ಥಿಗಳು ನೇರವಾಗಿ ಕಾಲೇಜಿಗೆ ವರದಿ ಮಾಡಿಕೊಳ್ಳಬಹುದು. ಅಂತಹ ಅಭ್ಯರ್ಥಿಗಳು ಈವರೆಗೆ ತಮಗೆ ಹಂಚಿಕೆಯಾಗಿರುವ ಸೀಟು ಕಾಲೇಜಿನಲ್ಲಿ ಭರ್ತಿಯಾಗದೆ ಲಭ್ಯವಿರುವ ಬಗ್ಗೆ ಖಚಿತ ಪಡಿಸಿಕೊಂಡು ನಂತರ ಹೋಗತಕ್ಕದ್ದು.

To Registrar ... 26/10/23

ಮು.ತಿ.ನೋ..

To Mr ... 26/10/23

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in

Scanned by CamScanner

ಸರ್ಕಾರಿ ಕಾಲೇಜುಗಳಲ್ಲಿ ಬಾಕಿ ಉಳಿದಿರುವ ಸುಮಾರು 237 ಸೀಟುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಸೀಟು ಹಂಚಿಕೆ ಮಾಡಲಾಗುವುದು. ಆಸಕ್ತ ಅಭ್ಯರ್ಥಿಗಳು ದಿನಾಂಕ. 30.10.2023ರಂದು ರೂ.40,860/- ಗಳಿಗೆ Executive Director, KEA, Bangalore ಇವರ ಹೆಸರಿನಲ್ಲಿ ಡಿಡಿ ತೆಗೆದುಕೊಂಡು ಸೀಟು ಹಂಚಿಕೆಗೆ ಪ್ರಾಧಿಕಾರದಲ್ಲಿ ಬೆಳಿಗ್ಗೆ 10.00 ಗಂಟೆಗೆ ಹಾಜರಾಗಬೇಕು. ಬಾಕಿ ಉಳಿದಿರುವ ಸೀಟುಗಳ ವಿವರವನ್ನು ದಿನಾಂಕ. 20.10.2023ರಂದು ಸಂಜೆ 6.00 ಗಂಟೆಗೆ ಪ್ರಕಟಿಸಲಾಗುವುದು. ಪ್ರಾಧಿಕಾರದಲ್ಲಿ ಮೂರು ಸುತ್ತಿನ ಸೀಟು ಹಂಚಿಕೆಯ ನಂತರ ಯಾವುದೇ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಮಾತ್ರ ಅರ್ಹರಿರುತ್ತಾರೆ.

ಮತ್ತೊಂದು ಸುತ್ತಿನ ಸೀಟು ಹಂಚಿಕೆ ನಡೆಯುವ ಕಾರಣ ಎರಡನೇ ವಿಸ್ತರಿಸಿದ ಸುತ್ತಿನಲ್ಲಿ ಸೀಟು ಪಡೆದಿರುವ ಅಭ್ಯರ್ಥಿಗಳಿಗೆ ಐದು ಪಟ್ಟು ದಂಡ ಅನ್ವಯವಾಗುವುದಿಲ್ಲ. ಸೀಟನ್ನು ರದ್ದು ಪಡಿಸಲು ಇಚ್ಛಿಸುವ ಅಭ್ಯರ್ಥಿಗಳಿಗೆ (ಎಲ್ಲಾ ವರ್ಗದ ಅಭ್ಯರ್ಥಿಗಳು) ಅವರಿಗೆ ಹಂಚಿಕೆಯಾಗಿರುವ ಸೀಟಿಗೆ ಸರ್ಕಾರವು ನಿಗಧಿಪಡಿಸಿರುವ ಕೋರ್ಸಿನ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಂಡು ಸೀಟನ್ನು ರದ್ದುಪಡಿಸಲಾಗುವುದು. ಅಂತಹ ಅಭ್ಯರ್ಥಿಗಳು ಸೀಟು ರದ್ಧತಿ ಪತ್ರ ಪಡೆಯಲು ದಿನಾಂಕ. 25.10.2023ರೊಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಸೀಟನ್ನು ರದ್ದುಪಡಿಸಬಹುದಾಗಿ ತಿಳಿಸಿದೆ. ಶುಲ್ಕ ಪಾವತಿಸದ ಅಭ್ಯರ್ಥಿಗಳು (ಎಲ್ಲಾ ವರ್ಗದ ಅಭ್ಯರ್ಥಿಗಳು) ಸೀಟನ್ನು ರದ್ದುಪಡಿಸಲು ಇಚ್ಛಿಸಿದಲ್ಲಿ ಸರ್ಕಾರವು ನಿಗಧಿಪಡಿಸಿರುವ ಕೋರ್ಸಿನ ಶುಲ್ಕದ ಮೊತ್ತದ ಡಿಡಿಯೊಂದಿಗೆ ದಿನಾಂಕ. 25.10.2023ರೊಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಸೀಟನ್ನು ರದ್ದುಪಡಿಸಿಕೊಳ್ಳಲು ತಿಳಿಸಿದೆ. ಈಗಾಗಲೇ ಐದು ಪಟ್ಟು ದಂಡ ಪಾವತಿಸಿ ಸೀಟನ್ನು ರದ್ದುಪಡಿಸಿರುವ ಅಭ್ಯರ್ಥಿಗಳಿಗೆ ದಿನಾಂಕ. 02.11.2023ರಿಂದ ಕೋರ್ಸಿನ ಶುಲ್ಕವನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಮರುಪಾವತಿ ಮಾಡಲಾಗುವುದು. ಅಂತಹ ಅಭ್ಯರ್ಥಿಗಳು ಪ್ರಾಧಿಕಾರಕ್ಕೆ ದಾಖಲಾತಿಗಳೊಂದಿಗೆ ದಿನಾಂಕ. 02.11.2023ರಂದು ಹಾಜರಾಗಬಹುದು.

ಹಂಚಿಕೆಯಾಗದೆ ಬಾಕಿ ಉಳಿದಿರುವ ಸೀಟುಗಳನ್ನು ಖಾಸಗಿ ಕಾಲೇಜುಗಳು ಪ್ರಾಧಿಕಾರಕ್ಕೆ ಹಿಂದಿರುಗಿಸಿದಲ್ಲಿ ಅಂತಹ ಸೀಟುಗಳ ಹಂಚಿಕೆಯ ವಿಧಾನವನ್ನು ದಿನಾಂಕ. 26.10.2023ರಂದು ಪ್ರಕಟಿಸಲಾಗುವುದು.

ಸಹಿ/-

ಕಾರ್ಯನಿರ್ವಾಹಕ ನಿರ್ದೇಶಕರು

Scanned by CamScanner

# ವಿಶ್ವೇಶ್ವರಯ್ಯ ಇಂಜನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ (ಯುವಿಸಿಇ)

(ರಾಜ್ಯ ಸರ್ಕಾರದ ಪ್ರಥಮ ಐಐಟಿ ಮಾದರಿಯ ಸ್ವಾಯತ್ತ ಸಂಸ್ಥೆ)

ಕೆ.ಆರ್. ವೃತ್ತ, ಬೆಂಗಳೂರು – 560 001

ನಂ: ಯುವಿಸಿಇ/ಉಶಿಇ/UG/2023-24/325 ದಿನಾಂಕ: 26.10.2023

ಗೆ,
ಪ್ರಧಾನ ಕಾರ್ಯದರ್ಶಿರವರು
ಉನ್ನತ ಶಿಕ್ಷಣ ಇಲಾಖೆ
ಬಹುಮಹಡಿ ಕಟ್ಟಡ, ಬೆಂಗಳೂರು-01.

ಮಾನ್ಯರೇ,

ವಿಷಯ: 2023-24 ನೇ ಸಾಲಿನಲ್ಲಿ ಮೊದಲನೇ ಸೆಮಿಸ್ಟರ್ ಬಿ.ಟೆಕ್/ಬಿ.ಆರ್ಕ್ ಪದವಿಗೆ ಪ್ರವೇಶಾತಿ ಪಡೆದು ಖಾಲಿ ಉಳಿದಿರುವ UG ಸೀಟುಗಳನ್ನು ಭರ್ತಿಮಾಡುವ ಬಗ್ಗೆ.

ಉಲ್ಲೇಖ:
1. AICTE Extension of Approval (EOA) letter for 2023-24 dated: 10.06.2023.
2. Government order No: ED 49 TEC 2016, dated: 05.08.2016.

*****

ಯುವಿಸಿಇ ಇಂಜನಿಯರಿಂಗ್ ಕಾಲೇಜು ಯುವಿಸಿಇ ಕಾಯ್ದೆ 2021 ರನ್ವಯ ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರತ್ಯೇಕ ಹೊಂದಿದ್ದು, ಒಂದು ಸ್ವತಂತ್ರ್ಯ ವಿಶ್ವವಿದ್ಯಾಲಯವಾಗಿ ದಿನಾಂಕ 25.03.2022 ರಿಂದ ಕಾರ್ಯರೂಪಕ್ಕೆ ಬಂದಿರುತ್ತದೆ.

ಮುಂದುವರೆದು, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24 ನೇ ಸಾಲಿನಲ್ಲಿ ಮೊದಲನೇ ಸೆಮಿಸ್ಟ್ ರ್ ಬಿ.ಟೆಕ್/ಬಿ.ಆರ್ಕ್ ಪದವಿಗೆ KEA ಇಂದ ಒಟ್ಟು 800 ಸೀಟುಗಳು ಮಂಜೂರಾಗಿದ್ದು, ಈ ಸಾಲಿನಲ್ಲಿ ಒಟ್ಟು 777 ಸೀಟುಗಳು ಭರ್ತಿಯಾಗಿದ್ದು, ಉಳಿದ 23 ಸೀಟುಗಳನ್ನು 2016-17ನೇ ಸಾಲಿನಲ್ಲಿ ಉಳಿದ ಸೀಟುಗಳನ್ನು ಭರ್ತಿ ಮಾಡಿರುವ ರೀತಿಯಲ್ಲಿಯೇ (ಉಲ್ಲೇಖ-2) KEA ಮುಖಾಂತರ (ವಿಶೇಷ ಸುತ್ತಿನಲ್ಲಿ) ಭರ್ತಿ ಮಾಡಲು ಅನುವಾಗುವಂತೆ ಅತಿ ಶೀಘ್ರವಾಗಿ ಕ್ರಮಕೈಗೊಳ್ಳಬೇಕಾಗಿ ವಿನಂತಿಸುತ್ತೇವೆ.

**Table: Details of UG seats Approved, Filled and Vacant in the Academic Year 2023-24**

| Sl. No. | Name of the Course / Branch | Approved Intake | Reported | Vacancy |
|---|---|---|---|---|
| 1 | Architecture | 40 | 28 | 12 |
| 2 | Civil Engineering | 120 | 117 | 03 |
| 3 | Mechanical Engineering | 160 | 157 | 03 |
| 4 | Electrical and Electronics Engineering | 120 | 118 | 02 |
| 5 | Electronics and Communication Engineering | 120 | 120 | 0 |
| 6 | Computer Science and Engineering | 120 | 119 | 1 |
| 7 | Information Science and Engineering | 60 | 58 | 02 |
| 8 | Artificial Intelligence and Machine Learning | 60 | 60 | 0 |
| **Total** | | 800 | 777 | 23 |

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ನಿರ್ದೇಶಕರು (ಪ್ರಭಾರ)
26/10/23

ಪ್ರತಿ:
1. ಅಧ್ಯಕ್ಷರು, ಆಡಳಿತ ಮಂಡಳಿ, ಯುವಿಸಿಇ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು.
3. ಕುಲಸಚಿವರು (ಪ್ರಭಾರ), ಯುವಿಸಿಇ, ಬೆಂಗಳೂರು.
4. ಕಛೇರಿ ಪ್ರತಿ.

Scanned by CamScanner